ಕರ್ನಾಟಕ ವಿಧಾನ ಪರಿಷತ್

ಸದಸ್ಯರ ಹೆಸರು	ಶ್ರೀ ಸಿ.ಎಂ.ಇಬ್ರಾಹಿಂ (ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು)
ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	1323
ಉತ್ತರಿಸಬೇಕಾದ ದಿನಾಂಕ	08.03.2022
ಉತ್ತರಿಸಬೇಕಾದ ಸಚಿವರು	ನಗರಾಭಿವೃದ್ಧಿ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ 2021-22 ನೇ ಸಾಲಿನಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ಎಲ್ಲೆಲ್ಲಿ ಸ್ಥಿರ ಜಲ ಮೂಲಗಳಿಂದ ಸಮರ್ಪಕ ನೀರು ಸರಬರಾಜು ಯೋಜನೆಗಳನ್ನು ಕೈಗೊಳ್ಳಲಾಗಿದೆ? (ಸಂಪೂರ್ಣ ಮಾಹಿತಿ ನೀಡುವುದು)	ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ 2021-22 ನೇ ಸಾಲಿನಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ಸ್ಥಿರ ಜಲ ಮೂಲಗಳಿಂದ ಈ ಕೆಳಕಂಡ ಯೋಜನೆಗಳನ್ನು ಕೈಗೊಳ್ಳಲಾಗಿದೆ:- ಅ) ಶಿವಮೊಗ್ಗ ನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಹೊರವಲಯದಲ್ಲಿ 11 ಜೋನ್‌ಗಳಿಗೆ ನಿರಂತರ ನೀರು ಸರಬರಾಜು ವಿತರಣಾಜಾಲವನ್ನು ಅಳವಡಿಸುವ ರೂ.96.50 ಕೋಟಿ ಮೊತ್ತದ ಯೋಜನೆಗೆ ಸರ್ಕಾರದ ಆದೇಶ ದಿನಾಂಕ: 03.06.2021 ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಈ ಯೋಜನೆಯಡಿ ಒಟ್ಟು 325.00 ಕಿ.ಮೀ. ಹೆಚ್.ಡಿ.ಪಿ.ಇ. ವಿತರಣಾ ಕೊಳವೆ ಮಾರ್ಗ ಮತ್ತು 11,000 ಗೃಹ ಸಂಪರ್ಕ ಕಲ್ಪಿಸಲು ಅವಕಾಶವಿದ್ದು, ಈ ಯೋಜನೆಯ ಕಾಮಗಾರಿಗಳು ಪ್ರಗತಿಯಲ್ಲಿದೆ. ಆ) ಸೋಗಾನೆ ಗ್ರಾಮದಲ್ಲಿ ನಿರ್ಮಿಸುತ್ತಿರುವ ಶಿವಮೊಗ್ಗ ನಗರದ ವಿಮಾನ ನಿಲ್ದಾಣಕ್ಕೆ ನೀರು ಸರಬರಾಜು ವ್ಯವಸ್ಥೆ ಕಲ್ಪಿಸುವ ಕಾಮಗಾರಿಯ ರೂ.4.70 ಕೋಟಿ ಮೊತ್ತದ ಯೋಜನೆಗೆ ಸರ್ಕಾರದ ಆದೇಶ ದಿನಾಂಕ: 01.09.2021 ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಈ ಯೋಜನೆಯಡಿ ಭದ್ರಾವತಿ ನೀರು ಸರಬರಾಜು ಯೋಜನೆಯಿಂದ 0.50 ಎಂ.ಎಲ್.ಡಿ ನೀರನ್ನು ವಿಮಾನ ನಿಲ್ದಾಣಕ್ಕೆ ಸರಬರಾಜು ಮಾಡಲು ಉದ್ದೇಶಿಸಲಾಗಿದ್ದು, ಈ ಯೋಜನೆಯಡಿಯಲ್ಲಿ 3.90 ಕಿ.ಮೀ. DI ಏರುಕೊಳವೆ ಮಾರ್ಗ ಮತ್ತು 5 ಲಕ್ಷ ಲೀಟರ್ ಸಾಮರ್ಥ್ಯದ GLSR ನಿರ್ಮಾಣ ಮಾಡುವ ಕಾಮಗಾರಿಗಳಿಗೆ ಅನುವು ಮಾಡಲಾಗಿದೆ. ಕಾಮಗಾರಿಯನ್ನು ಕೈಗೊಳ್ಳಲು ಗುತ್ತಿಗೆದಾರರನ್ನು ಟೆಂಡರ್ ಮುಖಾಂತರ ನೇಮಿಸಿದ್ದು, ಕಾಮಗಾರಿ ಪ್ರಾರಂಭಿಸಬೇಕಾಗಿರುತ್ತದೆ ಎಂದು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ರವರು ವರದಿ ಮಾಡಿರುತ್ತಾರೆ.

<table>
<tr>
<td>ಆ)</td>
<td>ಅಮೃತ್ ಯೋಜನೆಯಡಿ ಆಯ್ಕೆಯಾಗಿರುವ ಭದ್ರಾವತಿ ನಗರದಲ್ಲಿ ಕಳೆದ ಮೂರು ವರ್ಷಗಳಿಂದ ಎಷ್ಟು</td>
<td>ಭದ್ರಾವತಿ ನಗರಸಭೆಯ ವ್ಯಾಪ್ತಿಯಲ್ಲಿ ಕೇಂದ್ರ ಪುರಸ್ಕೃತ ಅಮೃತ್ ಯೋಜನೆಯಡಿ ಅನುಮೋದನೆಯಾದ ಅನುದಾನದ ಅನುಪಾತ ಕೇಂದ್ರ 50%, ರಾಜ್ಯ 20%, ನಗರ ಸ್ಥಳೀಯ ಸಂಸ್ಥೆ 30% ರಂತೆ ರೂ.4.00 ಕೋಟಿಗಳ ಮೊತ್ತದಲ್ಲಿ 6 ಉದ್ಯಾನವನಗಳನ್ನು ಅಭಿವೃದ್ಧಿಪಡಿಸಲಾಗಿದೆ.
1) ವಾರ್ಡ್ ನಂ 13 ರ ಕೇಶವಪುರ ಬಡಾವಣೆ
2) ವಾರ್ಡ್ ನಂ 06 ರ ಸಿದ್ಧರೂಢನಗರ
3) ವಾರ್ಡ್ ನಂ 29 ಎನ್.ಟಿ.ಬಿ ಸಿದ್ದಾಪುರ
4) ವಾರ್ಡ್ ನಂ 34 ಅಪ್ಪರ್ ಹುತ್ತಾ
5) ವಾರ್ಡ್ ನಂ 06 ಜಟ್ ಪಟ್ ನಗರ
6) ಭದ್ರಾವತಿ ನಗರದ ನ್ಯೂ ಟೌನ್ ಗಾಂಧಿ ಪಾರ್ಕ್
ಕೈಗೊಂಡ 6 ಕಾಮಗಾರಿಗಳಲ್ಲಿ 5 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ ಹಾಗೂ ಈ ತನಕ ರೂ.2.99 ಕೋಟಿಗಳನ್ನು ವೆಚ್ಚ ಮಾಡಲಾಗಿದೆ. ಕೈಗೊಂಡ ಉದ್ಯಾನವನಗಳ ಅಭಿವೃದ್ಧಿ ಕಾಮಗಾರಿಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.</td>
</tr>
<tr>
<td>ಇ)</td>
<td>ಸದರಿ ಯೋಜನೆಯಡಿ ಎಲ್ಲೆಲ್ಲಿ ಒಳಚರಂಡಿ ಮತ್ತು ರೊಚ್ಚು ಸಂಸ್ಕರಣಾ ಘಟಕಗಳನ್ನು ನಿರ್ವಹಣೆ ಮಾಡಲಾಗುತ್ತಿದೆ? (ಸಂಪೂರ್ಣ ಮಾಹಿತಿ ಒದಗಿಸುವುದು)</td>
<td>ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ಅಮೃತ್ ಯೋಜನೆಯಡಿ ಒಳಚರಂಡಿ ಮತ್ತು ರೊಚ್ಚು ಸಂಸ್ಕರಣಾ ಘಟಕಗಳನ್ನು ತಾತ್ಕಾಲಿಕವಾಗಿ ನಿರ್ವಹಣೆ ಮಾಡುವ ವಿವರ ಈ ಕೆಳಕಂಡಂತಿದೆ.
<table>
<tr><th>ಕ್ರ. ಸಂ</th><th>ನಗರ</th><th>ಸಾಮರ್ಥ್ಯ (ಎಂ.ಎಲ್.ಡಿ.)</th><th>ತಂತ್ರಜ್ಞಾನ</th><th>ಒಳಚರಂಡಿ ಜಾಲ (ಕಿ.ಮೀ)</th><th>ಗೃಹ ಸಂಪರ್ಕ</th></tr>
<tr><td>1</td><td>ಬಾದಾಮಿ</td><td>4.30</td><td>ಎಸ್.ಬಿ.ಟಿ.</td><td>30.99</td><td>1853</td></tr>
<tr><td rowspan="5">2</td><td rowspan="5">ಹುಬ್ಬಳ್ಳಿ-ಧಾರವಾಡ</td><td>10.00</td><td>ಎಸ್.ಬಿ.ಆರ್.</td><td rowspan="5">195.74</td><td rowspan="5">13819</td></tr>
<tr><td>3.00</td><td>ಎಸ್.ಬಿ.ಆರ್.</td></tr>
<tr><td>1.00</td><td>ಫೈಟ್ರಾಯ್ಡ್</td></tr>
<tr><td>3.00</td><td>ಫೈಟ್ರಾಯ್ಡ್</td></tr>
<tr><td>0.25</td><td>ಎಮ್.ಬಿ.ಬಿ.ಆರ್</td></tr>
<tr><td>3</td><td>ಗದಗ-ಬೆಟಗೇರಿ</td><td>13.88</td><td>ಡಬ್ಲ್ಯೂ.ಎಸ್.ಪಿ.</td><td>338.49</td><td>29520</td></tr>
<tr><td>4</td><td>ಬಳ್ಳಾರಿ</td><td>10.00</td><td>ಎಸ್.ಬಿ.ಆರ್.</td><td>122.4</td><td>6251</td></tr>
<tr><td>5</td><td>ಬೀದರ್</td><td>17.26</td><td>ಎಸ್.ಬಿ.ಆರ್.</td><td>132.9</td><td>19519</td></tr>
<tr><td>6</td><td>ಕಲಬುರ್ಗಿ</td><td>20.00</td><td>ಎಸ್.ಬಿ.ಆರ್.</td><td>219</td><td>18474</td></tr>
</table>
</td>
</tr>
</table>

7	ಗಂಗಾವತಿ	14.00	ಫ್ಯಾಕಲ್ಟೇಟಿವ್ ಏರೇಟೆಡ್ ಲಗೂನ್	63.37	14945
8	ರಾಯಚೂರು	5.50	ಎಸ್.ಬಿ.ಆರ್.	144.35	11412
9	ಭದ್ರಾವತಿ	7.20	ಡಬ್ಲ್ಯೂ.ಎಸ್.ಪಿ.	34.31	5108
		5.83	ಡಬ್ಲ್ಯೂ.ಎಸ್.ಪಿ.		
		1.00	ಎಸ್.ಬಿ.ಆರ್.		
10	ಶಿವಮೊಗ್ಗ	5.13	ಎಸ್.ಬಿ.ಆರ್.	57.72	7510
11	ಚಿತ್ರದುರ್ಗ	-	-	-	3865
12	ತುಮಕೂರು	-	-	60.3	5250
13	ಕೆ. ಜಿ. ಎಫ್	-	-	73.35	8439
14	ಹೊಸಪೇಟೆ	-	-	98.01	7171
15	ಮಂಡ್ಯ	-	-	12.31	1820
16	ಬಾಗಲಕೋಟೆ	-	-	18.12	8338
	ಒಟ್ಟು	**121.35 (ಎಂ.ಎಲ್.ಡಿ.)**		**1601.36 (ಕಿ.ಮೀ)**	**163294**

ಕೇಂದ್ರ ಪುರಸ್ಕೃತ ಅಮೃತ್ ಯೋಜನೆಯಡಿ ಭದ್ರಾವತಿ ನಗರಸಭೆಯ ವ್ಯಾಪ್ತಿಯಲ್ಲಿ ಒಟ್ಟು ರೂ.46.25 ಕೋಟಿ ಮೊತ್ತದ 2 ಒಳಚರಂಡಿ ಯೋಜನೆಯ ಕಾಮಗಾರಿಗಳನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ಕೈಗೊಳ್ಳಲಾಗಿದೆ. ಸದರಿ ಯೋಜನೆಯಡಿಯಲ್ಲಿ 1 ಎಂ.ಎಲ್.ಡಿ. ಸಾಮರ್ಥ್ಯದ ಎಸ್.ಬಿ.ಆರ್ ತಂತ್ರಜ್ಞಾನದ ರೊಚ್ಚು ನೀರು ಸಂರಕ್ಷಣಾ ಘಟಕವನ್ನು ಉಜ್ಜನೀಪುರ ಜಾಗದಲ್ಲಿ ಮತ್ತು 7.2 ಎಂ.ಎಲ್.ಡಿ. ಸಾಮರ್ಥ್ಯದ ಡಬ್ಲ್ಯೂ.ಎಸ್.ಪಿ ತಂತ್ರಜ್ಞಾನದ ರೊಚ್ಚು ನೀರು ಸಂರಕ್ಷಣಾ ಘಟಕವನ್ನು ಸಿಗೇಬಾಗಿ ಜಾಗದಲ್ಲಿ ನಿರ್ಮಿಸಲಾಗಿದೆ ಮತ್ತು ಭದ್ರಾವತಿ ನಗರದಲ್ಲಿ ಉಜ್ಜನೀಪುರ, ಜಿಂಕ್ ಲೈನ್, ವೇಲೂರ್ ಶೆಡ್ ಮತ್ತು ತಮ್ಮಣ್ಣ ಕಾಲೋನಿಯಲ್ಲಿ ವೆಟ್ ವೆಲ್‌ಗಳನ್ನು ನಿರ್ಮಿಸಲಾಗಿದೆ ಮತ್ತು ಜಟ್‌ಪಟ್ ನಗರದಲ್ಲಿ ಹಾಲಿ ಇರುವ 5.83 ಎಂ.ಎಲ್.ಡಿ ಸಾಮರ್ಥ್ಯದ ಮಲೀನ ನೀರು ಶುದ್ಧೀಕರಣ ಘಟಕದ ಪುನಃಶ್ಚೇತನ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

ನಿಯಮಾನುಸಾರ ಅಮೃತ್ ಯೋಜನೆಯಡಿ ಭದ್ರಾವತಿ ನಗರಸಭಾ ವ್ಯಾಪ್ತಿಯ ಉಜ್ಜನೀಪುರ, ಜನ್ನಾಪುರ, ಅಪ್ಪರ್ ಹುತ್ತಾ,

		ಕುವೆಂಪುನಗರ, ತಮ್ಮಣ್ಣ ಕಾಲೋನಿಯಲ್ಲಿ ಮಂಜೂರಾಗಿರುವ ಒಳಚರಂಡಿ ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರಿಗೆ ವಹಿಸಲಾಗಿದ್ದು, ಒಳಚರಂಡಿ ಕಾಮಗಾರಿ ಪೂರ್ಣಗೊಂಡ ನಂತರ 5 ವರ್ಷ ಅವಧಿ ಗುತ್ತಿಗೆದಾರರು ನಿರ್ವಹಣೆ ಮಾಡಬೇಕಾಗಿದ್ದು, ನಿರ್ವಹಣಾ ವೆಚ್ಚವನ್ನು ಸ್ಥಳೀಯ ಸಂಸ್ಥೆ ವತಿಯಿಂದ ಭರಿಸಬೇಕಾಗಿರುತ್ತದೆ. ಈ ಸಂಬಂಧ ಜಂಟಿ ESCROW ಖಾತೆಯನ್ನು ಸ್ಥಳೀಯ ಸಂಸ್ಥೆಯ ಮತ್ತು ಮಂಡಳಿಯ ಹೆಸರಿನಲ್ಲಿ ತೆರೆದು, ನಿರ್ವಹಣೆ ಸಂಬಂಧ ಒಪ್ಪಂದ ನಿವೇದನಾ ಪತ್ರ (MOU) ಮಾಡಿಕೊಳ್ಳಬೇಕಾಗಿರುತ್ತದೆ. 5 ವರ್ಷಗಳ ನಿರ್ವಹಣಾ ಅವಧಿ ಮುಗಿದ ನಂತರ ನಗರಸಭೆಗೆ ಹಸ್ತಾಂತರಿಸಿಕೊಂಡು ನಿರ್ವಹಣೆ ಮಾಡಲಾಗುವುದು ಎಂದು ಪೌರಾಯುಕ್ತರು, ನಗರಸಭೆ ಭದ್ರಾವತಿರವರು ವರದಿ ನೀಡಿರುತ್ತಾರೆ.

ಸಂಖ್ಯೆ: ನಅಇ 43 ಯುಎಂಎಸ್ 2022

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು

Bhadravthi AMRUT Works - Parks

Amount in crore

Sl.No	Sector	Project Name	No of projects	SHPSC approved cost in cr	Tender Awarded cost	Physical progress in %	Financial progress in cr	Releases	
								Grants released GoI+GoK	ULB Share released
1	Parks	Development of Sidda ruda Nagara Park	1	0.50	0.49	100	0.47	2.69	0.4
2	Parks	Development of Gandhinagar park old town (ward No -13)	1	0.50	0.49	100	0.42		
3	Parks	Improvements of green apace and parks in ward no.28, Gandhi Park new town	1	0.50	0.49	100	0.49		
4	Parks	Development of Upper hutta park.	1	0.65	0.65	100	0.54		
5	Parks	Development of NTB park in Siddapura	1	0.85	0.89	100	0.79		
6	Parks	Development of Gandhi park New town	1	1.00	1.05	40	0.28		
Total of Parks=			**6**	**4**	**4.06**		2.99	2.69	0.4